**9. ವಿಷಯ: ಸಿದ್ದಾಪುರ ತಾಲ್ಲೂಕಿನಲ್ಲಿ ಹೆಚ್ಚಾಗಿರುವ ಕೀಟಗಳನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವ ಕುರಿತು.**

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಶಿರಸಿ):–** ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ದಯವಿಟ್ಟು ಗಮನಿಸಬೇಕು. ನನ್ನ ಸಿದ್ದಾಪುರ ತಾಲ್ಲೂಕಿನಲ್ಲಿ ಒಂದು ರೀತಿಯ ಕೀಟ ಸ್ಫೋಟವಾಗಿದೆ. ಕಳೆದ ಒಂದು ತಿಂಗಳಿನಿಂದ ಮಿತಿ ಇಲ್ಲದಷ್ಟು ಅರಣ್ಯದಲ್ಲಿ ಕೋಟಿ–ಕೋಟಿ ಸಂಖ್ಯೆಗಳಲ್ಲಿ ಕೀಟಗಳು ಕಾಣಿಸಿಕೊಂಡಿದೆ. ಈ ವಿಚಾರ ಯಾರಿಗೆ ಬರುತ್ತದೆ ಎಂಬುದು ಒಂದು ವಿಷಯವಿದೆ. ಅದು ಅರಣ್ಯದಲ್ಲಿ ಕಂಡಿದೆ. ಈಗ ಕೃಷಿ ಭೂಮಿಗೆ ಬರುತ್ತಿವೆ. ಈ ಕೀಟ ಯಾವುದು ಎಂಬುದನ್ನು ನೋಡುವುದಕ್ಕೆ ನಾನೂ ಸಹ ಅನೇಕ ತಜ್ಞರ ಜೊತೆಗೆ ಅಲ್ಲಿಗೆ ಹೋಗಿದ್ದೆ. ಅರಣ್ಯ ಇಲಾಖೆಯವರು, ಅರಣ್ಯ ಕಾಲೇಜಿನವರು ಇದ್ದರು, ತೋಟಗಾರಿಕಾ ಇಲಾಖೆಯ ಬೇರೆ ಬೇರೆ ತಜ್ಞರು ಇದ್ದರು. ಕೃಷಿ ಇಲಾಖೆಯವರು ಇದ್ದರು. ಅನೇಕ ತಜ್ಞರನ್ನು ಕರೆದುಕೊಂಡು ಹೋಗಿದ್ದೆ. ಕೋಟಿ–ಕೋಟಿ ಸಂಖ್ಯೆಯಲ್ಲಿ ಆಗಿ ಮನೆಯಲ್ಲಿಯೇ ಸುತ್ತುವರೆದಿದೆ. ನನ್ನ ಬಳಿ ಫೋಟೋ ಇದೆ. ಇದನ್ನು ನೋಡಿದರೆ ಆಘಾತವಾಗುತ್ತದೆ, ಭಯವಾಗುತ್ತದೆ. ಮೊದಲು ಸಣ್ಣ ಪ್ರದೇಶದಲ್ಲಿ ಕಂಡದ್ದು, ಈಗ ವಿಸ್ತಾರವಾಗಿ ಮನೆಗಳಿಗೂ ಹಬ್ಬುತ್ತಿದ್ದು, ಮನೆಗಳಲ್ಲಿ ಜನರು ವಾಸಿಸುವ ಸ್ಥಿತಿಯಲ್ಲಿಲ್ಲ. ಇದು ಒಂದು ರೀತಿಯ ಕೀಟ ಸ್ಫೋಟ. ಈ ಕೀಟಗಳು ಮಳೆ ಬಂದರೆ ಹೋಗುತ್ತವೆ ಎಂದು ಹೇಳಿದರು. ನಮ್ಮ ಕಡೆ ಒಂದು ವಾರ ಮಳೆ ಬಂದರೂ ಹೋಗಿಲ್ಲ ಬದಲಿಗೆ ಹೆಚ್ಚಾಗಿದೆ. ಇದರಿಂದ ಜನರು ಭಯಭೀತರಾಗಿ ಆತಂಕಗೊಂಡಿದ್ದಾರೆ. ಈ ರೀತಿಯ ಕೀಟಗಳನ್ನು ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ನಮ್ಮ ಸಿದ್ದಾಪುರ ಕ್ಷೇತ್ರದಲ್ಲಿ ಎಂದೂ ಕಂಡಿರಲಿಲ್ಲ. ಆ ಪ್ರಮಾಣದಲ್ಲಿ ಇದೆ. ಎಲ್ಲರೂ ಬಂದು ನೋಡಿದ್ದಾರೆ. ಆಗ ಆಗಲಿಲ್ಲ. ಹಾಗಾಗಿ ಎರಡು ವಿಷಯವನ್ನು ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮೊದಲನೆಯದಾಗಿ, ಕೀಟ ತಜ್ಞರ ಬೇರೆ ಬೇರೆ ತಂಡಗಳನ್ನಾಗಿ ಮಾಡಿ ಕಳುಹಿಸಬೇಕು. ಜಿಲ್ಲಾ ಮಟ್ಟ ಅಥವಾ Agriculture College, Dharwad University ವರೆಗೆ ಬಂದಿದ್ದಾರೆ. ಆದರೆ

ತಜ್ಞತೆ ಸಾಲುತ್ತಿಲ್ಲ. ಅವರು ಒಂದೆರಡು ತಿಂಗಳಿನಲ್ಲಿ ಹೋಗುತ್ತದೆಂದು ಹೇಳಿದರು. ಆದರೆ ಕೀಟಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅಂದರೆ ಊಹೆಗೂ ಮೀರಿದಷ್ಟು ಕೋಟಿ ಕೋಟಿ ಸಂಖ್ಯೆಯಲ್ಲಿ ಕೀಟಗಳು ಇವೆ. ಹಾಗಾಗಿ ಒಂದು ತಜ್ಞರ ತಂಡವನ್ನು ಕಳುಹಿಸಿ ಅದೇನೆಂದು ನೋಡಬೇಕು. ಮನೆ ಎಲ್ಲ ತುಂಬಿಕೊಳ್ಳುತ್ತಿವೆ.

**ಶ್ರೀ ಎನ್.ಎ. ಹ್ಯಾರಿಸ್:–** ಮಾನ್ಯ ಅಧ್ಯಕ್ಷರೆ, ತಾವು ನಮಗೆ ಪ್ರಶ್ನೋತ್ತರ ವೇಳೆಯಲ್ಲಿಯೇ ಇಷ್ಟು ಸಮಯವನ್ನು ಕೊಡುವುದಿಲ್ಲ. ಶೂನ್ಯ ವೇಳೆಯಲ್ಲಿ ಇಷ್ಟು ಸಮಯ ಕೊಡುತ್ತೀರಿ. ಇದು ಅನ್ಯಾಯ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಮಾನ್ಯ ಅಧ್ಯಕ್ಷರೆ, ಸಮಸ್ಯೆ ಅಷ್ಟು ಗಂಭೀರವಾಗಿದೆ. ಆ ಸಮಸ್ಯೆಯ ಮಧ್ಯೆ ಇದ್ದಿದ್ದರೆ ಗೊತ್ತಾಗುತ್ತಿತ್ತು ಅವರಿಗೆ.

**ಅಧ್ಯಕ್ಷರು:–** ಆ ಕಡೆ ಬೇಡ. ನೀವು ಈ ಕಡೆ ಮಾತನಾಡಿ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:–** ಅವರು ಮಾತನಾಡುತ್ತಿರುವುದರಿಂದ ಹೇಳಿದೆ. ಎರಡನೆಯದು ಏನೆಂದರೆ, ಅದಕ್ಕೆ ಬೇವಿನ ಎಣ್ಣೆ ಅಥವಾ ಬೇರೆ ರೀತಿಯ spray ಮಾಡಿ ಅವುಗಳನ್ನು ತಕ್ಷಣಕ್ಕೆ control ಗೆ ತರಬಹುದು ಎಂದು ತಜ್ಞರು ತಂಡವನ್ನು ಕಳುಹಿಸಿ ನೋಡಿಸಬೇಕು. ಇಲ್ಲದಿದ್ದರೆ ಜನರು ಮನೆಯಲ್ಲಿ ಇರಲಾಗುತ್ತಿಲ್ಲ. ಅರಣ್ಯದಿಂದ ಕೃಷಿ ಭೂಮಿಗೆ ಬರುತ್ತಿವೆ. ಭಾರೀ ಕೀಟ ಸ್ಫೋಟವಾಗಿದೆ. ಕೊನೆಯದಾಗಿ ಈ ಕೀಟಕ್ಕೆ ಉಡಾಂಗ ಮೌಂಟಾನ ಎಂದು ಹೆಸರು ಇಟ್ಟಿದ್ದಾರೆ ಇವರು. ವಾಸ ಮಾಡುವುದಕ್ಕೆ ಆಗುತ್ತಿಲ್ಲ.

**ಶ್ರಿ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):–** ಮಾನ್ಯ ಅಧ್ಯಕ್ಷರೆ, ಯಾವುದೇ ಹೆಸರನ್ನು ಇಡಲಿ. ಇಂದು ಕೀಟ ಸ್ಫೋಟದ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಇದು ಯಾರಿಗೂ ಗೊತ್ತಿಲ್ಲ. ಯಾರೂ, ಯಾವತ್ತೂ ಅರಿಯದೆ ಇರುವಂತಹುದು ಎಂಬ ವಿಚಾರವನ್ನು ತಂದಿರುವ ಹಿನ್ನೆಲೆಯಲ್ಲಿ ಕೂಡಲೇ Director of Agriculture ರವರಿಗೆ ನಿರ್ದೇಶನ ನೀಡಿ ಸ್ಥಳವನ್ನು ಪರಿಶೀಲನೆ ಮಾಡಿ, ಅದು ಯಾವುದು,

ಏನು ಕತೆ ಎಂಬುದನ್ನು ನೋಡುತ್ತೇವೆ. ಯೂನಿವರ್ಸಿಟಿಗೂ ಕೂಡಾ ಸೂಚನೆ ನೀಡಿ ಅದಕ್ಕೆ ಇಂದೇ ಪರಿಹಾರ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು:**– ಬೇಗ ಮಾಡಿ. ಈಗ ವಿತ್ತೀಯ ಕಾರ್ಯಕಲಾಪಗಳು. ಶ್ರೀ ಸಿ.ಟಿ. ರವಿ ರವರಿಂದ ಮುಂದುವರೆದ ಚರ್ಚೆ. ರವಿ ಯವರೆ, ಹೆಚ್ಚು ಹೊತ್ತು ತೆಗೆದುಕೊಳ್ಳಬೇಡಿ. ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ.

**ಶ್ರೀ ವೈ.ಎಸ್.ವಿ. ದತ್ತಾ:**– ಮಾನ್ಯ ಅಧ್ಯಕ್ಷರೆ, ಅಂದೂ ಕೂಡಾ ನಮ್ಮ ಪಕ್ಷದ ನಾಯಕರು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡಿದ್ದರು. ಇನ್ನು ಮುಂದೆ ಬೇಡಿಕೆಗಳ ಮೇಲಿನ ಚರ್ಚೆಗೆ ತಾವು ದಯವಿಟ್ಟು ಪಕ್ಷಕ್ಕೆ ಇಷ್ಟು ಸಮಯವೆಂದು ಕೊಟ್ಟರೆ ಆ ಸಮಯವನ್ನು ನಾವು adjust ಮಾಡಿಕೊಳ್ಳುತ್ತೇವೆ. ಏಕೆಂದರೆ, ಇದರಲ್ಲಿ ಸ್ವಲ್ಪ ಸರಿಯಾಗುತ್ತಿಲ್ಲ. ಕೆಲವರು 5 ನಿಮಿಷ ಮಾತನಾಡಿದರೆ, ಕೆಲವರು ಗಂಟೆಗಟ್ಟಲೆ ಮಾತನಾಡುತ್ತಾರೆ. ಅದಕ್ಕಾಗಿ ಒಂದು ಸಮಯವನ್ನು ನಿಗದಿ ಮಾಡಿ.

**ಅಧ್ಯಕ್ಷರು:**– ತಾವು ಮಾಡಿದ ಸಲಹೆ ಉತ್ತಮವಾಗಿದೆ. ಇಲ್ಲವೆಂದು ನಾನು ಹೇಳುವುದಿಲ್ಲ. ನಾನು BAC ಸಭೆ ಕರೆದು ಅಲ್ಲಿ ಒಂದು ತೀರ್ಮಾನ ಮಾಡಿ, ಯಾವ ರೀತಿ ಅಭಿಪ್ರಾಯ ಬರುತ್ತದೆಯೋ ಆ ರೀತಿ ಮಾಡೋಣ.

**ಶ್ರೀ ವೈ.ಎಸ್.ವಿ. ದತ್ತಾ:**– ಇನ್ನು ಮುಂದೆ ಬೇಡಿಕೆಗಳು ಬರುತ್ತಿರುವುದರಿಂದ ಈ ಕೆಲಸವನ್ನು ಬೇಗ ಮಾಡಬೇಕು.

**ಅಧ್ಯಕ್ಷರು:**– ಆಯಿತು. ಈ ಬಾರಿ ಅವಕಾಶ ಮಾಡಿಕೊಡುತ್ತೇನೆ. ಈಗ ರವಿ ರವರು ಮಾತನಾಡಿ.